ದಿನಾಂಕ 08-04-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ.ಎಸ್ ಜಿ ಎಸ್ ವಕೀಲರಿಂದಃ-

ನಾನು 9 ನೇ ತರಗತಿಯ ವರೆಗೆ ಕಲಿತಿದ್ದೇನೆ. ವಾದಿ ಏತಕ್ಕೆ ಕೇಸು ಹಾಕಿದ್ದಾರೆಂದು ಗೊತ್ತಿದೆ. ವಾದಿ ಪತ್ರದಲ್ಲಿ ಏನು ಬರೆಸಿದ್ದಾರೆಂದು ಗೊತ್ತಿಲ್ಲ. ನಾನು ಏನು ತಕರಾರು ಸಲ್ಲಿಸಿದ್ದೇನೆ ಹಾಗೂ ಏನೇನು ದಾಖಲೆ ಹಾಜರುಪಡಿಸಿದ್ದೇನೆಂದು ಗೊತ್ತಿದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿ ಕೊಟ್ಟದುದ ನಾನೇ. ಅದನ್ನು ವಕೀಲರಿಂದ ಓದಿಸಿ ತಿಳಿದುಕೊಂಡಿದ್ದೇನೆ. ನನ್ನ ತಾಯಿಯ ತಂದೆಯ ಹೆಸರು ನರಸಿಂಹಯ್ಯ ಎಂದರೆ ಸರಿ. ನರಸಿಂಹಯ್ಯನಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿ 4 ಜನ ಗಂಡು ಮಕ್ಕಳು, ನನ್ನ ತಾಯಿ ಒಬ್ಬ ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಲಕ್ಷಮ್ಮ ನಿಗೆ ಅವರ ತಾಯಿಯ ಕಡೆಯಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಲಕ್ಷಮ್ಮನಿಗೆ ಹೇಗೆ ಬಂದವು ಎಂದರೆ ನಮ್ಮ ತಂದೆಯ ಎಂದರೆ ಸಾಕ್ಷಿ ನಮ್ಮ ತಂದೆಯ ಅಣ್ಣ ವೆಂಕಟರಮಣ್ಣಪ್ಪರವರಿಂದ ತೆಗೆದುಕೊಂಡು ನನ್ನ ದೊಡ್ಡಪ್ಪ ನನ್ನ ತಾಯಿಗೆ ಕೊಟ್ಟರು ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ತಿಮ್ಮಾರಯ್ಯ. ದಾವಾ ಸ್ವತ್ತುಗಳು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ. ನನ್ನ ತಾಯಿ ದಾವಾ ಸ್ವತ್ತುಗಳ ಖಾತೆ ಮಾಡಿಸಿಕೊಂಡು ಉಳುಮೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ನನ್ನ ತಾಯಿ  ನನ್ನ ಹಾಗೂ ವಾದಿಯ  ಜೊತೆ ವಿಶ್ವಾಸದಿಂದ ಇದ್ದರು ಎಂದರೆ ಸರಿ. 07.07.2010 ರಲ್ಲಿ ನನ್ನ ಅಣ್ಣ ತಿಮ್ಮಯ್ಯನಿಗೆ ನನ್ನ ತಾಯಿ ದಾವಾ ಸ್ವತ್ತುಗಳನ್ನು ದಾನ ಪತ್ರದ ಮುಖಾಂತರ ಹಸ್ತಾಂತರ ಮಾಡಿರುತ್ತಾರೆಂದರೆ ಗೊತ್ತಿಲ್ಲ.  ವಾದಿಗೆ ದಾವಾ ಸ್ವತ್ತುಗಳು ಯಾವ ದಾಖಲೆ ಮುಖಾಂತರ ಹೋಗಿವೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ದಾನ ಪತ್ರ ಎಂದು ನುಡಿಯುತ್ತಾರೆ. ದಾನ ಪತ್ರದಂತೆ ವಾದಿಯ ಹೆಸರಿಗೆ ದಾವಾ ಸ್ವತ್ತುಗಳ ಖಾತೆ ಆಗಿದೆ ಎಂದರೆ

ಸರಿ. ದಾನ ಪತ್ರದಂತೆ ವಾದಿ ದಾವಾ ಸ್ವತ್ತುಗಳಲ್ಲಿ ಸ್ವಾ ಧೀನಾನುಭವ ಇದ್ದು ವ್ಯವಸಾಯ ಮಾಡಿಕೊಂಡಿದ್ದರು ಎಂದರೆ ಸರಿ. ವಾದಿಗೆ ಸಹಿ ಹಾಕುವುದನ್ನು ಬಿಟ್ಟು ಪತ್ರಗಳನ್ನು ಓದುವುದು ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿ 3ನೇ ತರಗತಿಯವರೆಗೆ ಕಲಿತಿದ್ದಾರೆಂದು ನನ್ನ ತಾಯಿ ಹೇಳುತ್ತಿದ್ದರು. ವಾದಿ ವಿದ್ಯಾಭ್ಯಾಸ ಮಾಡಿಲ್ಲ. ಸಹಿ ಹಾಕುವುದನ್ನು ಬಿಟ್ಟು ಪತ್ರಗಳನ್ನು ಓದುವುದು ಬರುವುದಿಲ್ಲ ಎಂದರೆ ಸರಿಯಲ್ಲ. 07.07.2010 ರ ದಾನಪತ್ರದಂತೆ ವಾದಿ ದಾವಾ ಸ್ವತುಗಳ ಮಾಲೀಕರಾಗಿದ್ದು ಸ್ವಾಧೀನಾನುಭವದಲ್ಲಿ ಇದ್ದು ಈಗಲೂ ವಾದಿಯೇ ಸ್ವಾ ಧೀನದಲ್ಲಿ ಇದ್ದಾರೆಂದರೆ ಸರಿಯಲ್ಲ.

2. ಸಿನ್ನ ಮಾರಾಟ ಮಾಡಿದ ಸ್ವತ್ತಿನ ಹಣವನ್ನು ನಾನು ಮತ್ತು ವಾದಿ ನನ್ನ ತಾಯಿಯ ಕಡೆಯಿಂದ ಪಡೆದುಕೊಂಡಿದ್ದೇವೆಂದರೆ ಸರಿಯಲ್ಲ. ನೀವು ಹಣ ಪಡೆದುಕೊಂಡು ಸೈಟುಗಳನ್ನು ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿ ವಾದಿಯ ಹೆಸರಿನಲ್ಲಿ ಒಟ್ಟಿಗೆ ಖರೀದಿ ಮಾಡಿದ್ದೇವೆಂದು ನುಡಿಯುತ್ತಾರೆ. ನಾನು ನನ್ನ ತಾಯಿ ನನ್ನ ಅಣ್ಣ ಒಟ್ಟಿಗೆ ವಾದಿವಿದ್ದೇವೆಂದು ತೋರಿಸಲು ಏನು ದಾಖಲೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಪಡಿತರ ಚೀಟಿಯಲ್ಲಿ ಎಲ್ಲರ ಹೆಸರುಗಳು ಬರುತ್ತವೆ ಎಂದರೆ ಸರಿ. ಎಲ್ಲರೂ ಒಟ್ಟಿಗೆ ವಾಸವಿದ್ದೇವೆಂದು ತೋರಿಸಲು ಪಡಿತರ ಚೀಟಿ ಹಾಜರುಪಡಿಸಬಹುದಾ ಎಂದರೆ ಸಾಕ್ಷಿ ಬೇರೆ ಬೇರೆ ಪಡಿತರ ಚೀಟಿ ಮಾಡಿದ್ದರು ಎಂದು ನುಡಿಯುತ್ತಾರೆ. ನಾನು 2004 ರಿಂದ ಪ್ರತ್ಯೇಕ ಪಡಿತರ ಚೀಟಿ ಮಾಡಿಸಿಕೊಂಡು ಬೇರೆ ಇದ್ದೇನೆ. ವಾದಿಯೂ ಸಹ ಪ್ರತ್ಯೇಕ ಪಡಿತರ ಚೀಟಿ ಮಾಡಿಸಿಕೊಂಡು ಬೇರೆ ಇದ್ದಾರೆಂದರೆ ಸಾಕ್ಷಿ ಜೊತೆಯಲ್ಲೇ ಇದ್ದೇವೆ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿ 2004 ರಿಂದಲೂ ಸಹ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆಂದರೆ ಸರಿಯಲ್ಲ.

3. 07.07.2010 ರಲ್ಲಿ ನಿಮ್ಮ ತಾಯಿ ವಾದಿಯ ಮೇಲೆ ಇದ್ದ ಪ್ರೀತಿ ವಾತ್ಸಲ್ಯದಿಂದ ದಾನ ಪತ್ರ ಬರೆದುಕೊಟ್ಟಿದ್ದಾರೆಂದರೆ ಸಾಕ್ಷಿ ನಮಗೆ ಗೊತ್ತೇ ಇಲ್ಲ ನಮ್ಮ ತಾಯಿಯ ಜೊತೆ ಕೇಸಿಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿ ತುಂಬಾ ಬುದ್ದಿವಂತರು ಹಾಗೂ ವ್ಯವಹಾರಿಕ ಜ್ಞಾನ

ಹೊಂದಿದ್ದರು ಎಂದರೆ ಸರಿಯಲ್ಲ.ನನ್ನ ತಾಯಿ ದಾವಾ ಸ್ವತ್ತುಗಳನ್ನು ವಾದಿಗೆ ದಾನ ಪತ್ರ ಬರೆದುಕೊಟ್ಟಿದ್ದರೂ ಸಹ ಸ್ವತ್ತುಗಳನ್ನುಕಬಳಿಸಬೇಕೆಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.